ದಿಕ್ಕೇ ತೋಚುತ್ತಿಲ್ಲ.

"ಶೀತಜ್ವರ ಅಂದ್ರೆ ಮೂರು ದಿನಕ್ಕೆ ಕಮ್ಮಿಯಾಗುತ್ತೆ" ಅನ್ನುತ್ತಿದ್ದಾನೆ ರಾಜೀವ.

"ಮೂರು ದಿನ? ಅಷ್ಟ್ರಲ್ಲಿ ನಾನೇ ಸತ್ಹೋಗ್ತೀನಿ..." ಅನ್ನುತ್ತಿದ್ದಾಳೆ ನರ್ಮದಾ. ಅದ್ಯಾಕೋ ಅವಳಿಗೆ ಫಕ್ಕನೆ ನೆನಪಾಯ್ತು. ಹಿಂದೊಮ್ಮೆ, ಈ ಕ್ರೂರ ಕಾಯಿಲೆ ತನ್ನ ಕಬಂಧಬಾಹುಗಳನ್ನು ಚಾಚುವ ಮುನ್ನ, ಮಗನಿಗೆ ಜ್ವರ ಬಂದಾಗ ಡಾಕ್ಟರು ಕೊಟ್ಟಿದ್ದ ಸಿರಪ್ ಯಾವುದೋ ಬ್ಯಾಗಿನಲ್ಲಿ ತುಂಬಿದ್ದೇನೆ. ಒಂದಿಷ್ಟು ಔಷಧಿ ಮಿಕ್ಕಿದೆ. ಯಾವ ಬ್ಯಾಗಿನಲ್ಲಿದೆ? ಪತ್ತೆ ತೆಗೆಯಬೇಕಾದರೆ ಬೆಳಗಾಗಬೇಕು.

ಬೆಳಕು ಹರಿಯುತ್ತಿದ್ದಂತೆ ಮೊದಲ ಕೆಲಸ ಕಟ್ಟಿಟ್ಟ ಗಂಟುಮೂಟೆಗಳನ್ನು ಬಿಚ್ಚಿ ಜಾಲಾಡಿದ್ದು. ಕೊನೆಗೂ ಔಷಧಿಯ ಬಾಟಲು ಸಿಕ್ಕಿತ್ತು, ನಿಧಿ ಸಿಕ್ಕಿದಂತೆ. ಅಳತೆ ಮುಚ್ಚಳಕ್ಕೆ ಔಷಧಿ ಬಗ್ಗಿಸಿ ಮಗನಿಗೆ ಕುಡಿಸಿದಳು ನರ್ಮದಾ. ಮಗನ ಹಣೆ, ಹೊಟ್ಟೆ, ಪಾದ ಮುಟ್ಟಿ ಮುಟ್ಟಿ ನೋಡುತ್ತಾ ಚಡಪಡಿಕೆಯಲ್ಲಿ ಹೊತ್ತು ಕಳೆಯಿತು. ಎರಡು ಗಂಟೆ ಅನ್ನುವುದರಲ್ಲಿ ಬೆವರತೊಡಗಿದ ಹುಡುಗ. ಇಂತಾ ಹೊತ್ತಲ್ಲೂ ರಾಜೀವ ಕನವರಿಸುತ್ತಿದ್ದಾನೆ, 'ದೂರ ಇಡುವುದು, ಅಂತರ ಕಾಪಾಡುವುದು ಅಂದರೆ ಈ ಮಟ್ಟಿಗಾ? ನಿಮಗೇನಾದ್ರೂ ಆವಶ್ಯಕತೆ ಉಂಟಾ?' ಎಂದು ವಿಚಾರಿಸುವುದಕ್ಕೂ ಮನೆಯವರಿಗೆ ತೋಚಲಿಲ್ಲವಾ? ಕೊನೇಪಕ್ಷ ಅಮ್ಮನಿಗೆ? ಊರಿನ ಜನ ಏನೇ ಹೇಳಲಿ, ಅಣ್ಣ ಇನ್ನೊಂದಷ್ಟು ಕಾಳಜಿ ತೋರಿಸಬಹುದಿತ್ತು. 'ಬಂದಿದ್ದಾನೆ, ಅನುಭವಿಸಲಿ' ಎನ್ನುವ ಧೋರಣೆ? ಇಲ್ಲೇ ಠಿಕಾಣಿ ಹಾಕಿದರೆ ಎನ್ನುವ ಸಂಶಯ? ಪಾಲು ಕೇಳಿದರೆ ಎನ್ನುವ ಅಂಜಿಕೆ? ಅಥವಾ ಹೀಗೇನೂ ಇಲ್ಲದೆ ನನಗೇ ಭ್ರಮೆ ಹತ್ತಿದೆಯಾ? ಇಲ್ಲ ಇಲ್ಲ ಇಲ್ಲ. ಎಲ್ಲರಿಗೂ ಮಹಾಮಾರಿಯ ಭಯ. ಅದರಲ್ಲೂ ಬೆಂಗಳೂರಿನಂತಹಾ ಪಟ್ಟಣದಿಂದ ಬಂದಿರುವವರೆಂದರೆ ಕಾಯಿಲೆಯ ಬೀಜ ಹೊತ್ತು ತಂದಿದ್ದಾರೆಂದೇ ಜನಸಾಮಾನ್ಯರ ದಿಗಿಲು. 'ಕೈಲಿ ಕಾಸಿಲ್ಲ' ಎನ್ನುವ ಹೊತ್ತಿನಲ್ಲೂ ಬಾಡಿಗೆ ವಾಹನ ಮಾಡಿಕೊಂಡು ಬಂದಿದ್ದು ವ್ಯರ್ಥವಾಯ್ತು. ಊರು ಸೇರಿಸಲಿಲ್ಲ ಊರವರು. ಮನೆ ಸೇರಿಸಲಿಲ್ಲ ಮನೆಯವರು. ಗಂಟಲಲ್ಲಿ ಏನೋ ಅಡ್ಡ ಸಿಕ್ಕಿಕೊಂಡಂತೆ ವಿಚಿತ್ರ ಸಂಕಟ. 'ಈ ಸಂದರ್ಭದಲ್ಲಿ ಜನ ನಡೆದುಕೊಳ್ಳುವ ರೀತಿಯೇ ಹೀಗೆ' ಅಂದುಕೊಂಡರೂ ರಾಜೀವನಿಗೆ ಸಮಾಧಾನವಾಗುತ್ತಿಲ್ಲ. ಎಲ್ಲರಿಂದ ತಿರಸ್ಕೃತವಾದಂತಾ, ಅವಮಾನಕ್ಕೊಳಗಾದಂತಾ ಚುಚ್ಚುವ ನೋವು ಎದೆಯೊಳಗೆ. ಸಂಬಂಧಗಳ ಆವಶ್ಯಕತೆ ಯಾವಾಗ? ಕಷ್ಟ, ಸಂಕಟಗಳು ಬೆನ್ನಟ್ಟಿ ಬಂದಾಗ. 'ಬಾ ತಮ್ಮಾ, ನಾನಿದ್ದೇನೆ' ಎನ್ನುವ ಭರವಸೆಯ ನಿರೀಕ್ಷೆಯಲ್ಲಿ ಓಡೋಡಿ ಬಂದವನಿಗೆ ಭ್ರಮನಿರಸನವಾಗಿತ್ತು. ದೂರ ಇಟ್ಟಿದ್ದು ತಪ್ಪಲ್ಲ. ಆದರೆ, ಇಷ್ಟು ದೂರ? ಕಣ್ಣೆತ್ತಿ ನೋಡಿದರೆ ಕಾಯಿಲೆ ಅಂಟಿಕೊಳ್ಳುತ್ತದೆಯೆನ್ನುವಷ್ಟು ಮೈಲಿ ದೂರ? ಜೊತೆಜೊತೆಗೆ ಆಟವಾಡಿದವರು, ಪಾಠ ಓದಿದವರೂ ಕೂಡಾ ಇತ್ತ ಹಣಕಿ ನೋಡಲಿಲ್ಲ. ಏನಾಗುತ್ತಿದೆ ಈ ಜಗತ್ತಿನಲ್ಲಿ? ಯಾರಿಗೆ ಯಾರೂ ಬೇಡವಾದಂತಾ, ಎಲ್ಲರನ್ನೂ ಸಂಶಯದ ದೃಷ್ಟಿಯಿಂದ ನೋಡುವಂತಾ ಕಾಲ ಬಂದುಬಿಟ್ಟಿದೆಯಾ? ರಾಜೀವ ತನ್ನ ಹಳಹಳಿಕೆಯನ್ನು ತನ್ನೊಳಗೇ ನುಂಗಿಕೊಂಡ.

'ಹೋದೆಯಾ ಪಿಶಾಚಿ ಅಂದ್ರೆ ಬಂದೆ ಗವಾಕ್ಷೀಲಿ' ಅನ್ನುವಂತೆ ಸಂಜೆಯ ಹೊತ್ತಿಗೆ ಸಮೀರನಿಗೆ ಮತ್ತೆ ಜ್ವರ ಬಂತು. ಕಂಗೆಟ್ಟಳು ನರ್ಮದಾ. ಮತ್ತೊಮ್ಮೆ ಮಗುವಿಗೆ ಔಷಧಿ ಕುಡಿಸಿದಳು. "ನಾಳೆಯೂ ಹೀಗೇ ಆದ್ರೆ ಡಾಕ್ಟರ ಹತ್ರ ಹೋಗ್ಲೇಬೇಕು" ಅಂದಳು. ಹೋಗಬೇಕು ಹೇಗೆ? ಕಾರು, ಬೈಕು ಇಟ್ಟುಕೊಂಡಿರುವ ಬೆರಳೆಣಿಕೆಯ ಮಂದಿ ಹಳ್ಳಿಯಲ್ಲಿದ್ದಾರೆ. ಅವರ ಕೈಕಾಲು ಹಿಡಿದರೆ ಸಹಾಯ ಮಾಡಿಯಾರೇ? ಅಸಲಿಗೆ ದಿಗ್ಬಂಧನದ ಅವಧಿ ಮುಗಿಯುವುದಕ್ಕೆ ಮುನ್ನವೇ ತಾನು ಊರು ಹೊಕ್ಕರೆ ಅದೊಂದು ದೊಡ್ಡ ಪ್ರಮಾದವಾಗಿ ಕಾಣಿಸಲಿಕ್ಕಿಲ್ಲವೇ? ಮತ್ತೆ? ದೇವರ ದಯ. ಬೆಳಗಿನ ಹೊತ್ತಿಗೆ ಜ್ವರ ಇಳಿಯಿತು. ಹೆತ್ತವರು ನಿಟ್ಟುಸಿರಿಟ್ಟರೂ ಆತಂಕ ತಪ್ಪಲಿಲ್ಲ. ಮತ್ತೆ ಜ್ವರ ಬಂದರೆ?